**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.318/2023**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸುರೇಶ ತಂದೆ ನಾಗಭೂಷಣ ಬಳಗಾರ
ವಃ 22 ವರ್ಷ, ಉಃ ಶ್ರೀ ಸಿಮೆಂಟ ಕಂಪನಿಯಲ್ಲಿ ಸಿವಿಲ್ ಕೆಲಸ
ಸಾಃ ಕೊಡ್ಲಾ ಗ್ರಾಮ, ತಾಃ ಸೇಡಂ

-----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 06-11-2022 ರಂದು ಸಾಯಂಕಾಲ 07.30 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣೆಯ ವ್ಯಾಪ್ತಿಯ ಹದ್ದಿಯ ಪೈಕಿ ಆರೋಪಿತನು ಮತ್ತು ಚಾಸಾ.01ರವರ ಅಣ್ಣನಾದ ಮೃತ ಸುರೇಶ ಇಬ್ಬರೂ ಕೂಡಿಕೊಂಡು ಚಾಸಾ.12ರವರು ಮಾಡಿದ ದೇವರ ಕಾರ್ಯಕ್ರಮಕ್ಕೆ ಆರೋಪಿತನ ಮೋಟಾರ ಸೈಕಲ ನಂ. KA-32/EY-7304 ನೇದ್ದರ ಮೇಲೆ ದೇವನೂರು ಗ್ರಾಮಕ್ಕೆ ಹೋಗಿ ಊಟ ಮುಗಿಸಿಕೊಂಡು ಮರಳಿ ಕೊಡ್ಲಾ ಗ್ರಾಮಕ್ಕೆ ಬರುವಾಗ ಆರೋಪಿತನು ತನ್ನ ವಶದಲ್ಲಿದ್ದ ಮೋಟಾರ ಸೈಕಲ ನಂ. KA-32/EY-7304 ನೇದ್ದನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಯಾದಗಿರಿ-ಕೊಡ್ಲಾ ಮುಖ್ಯ ರಸ್ತೆಯಲ್ಲಿ ಬರುವಾಗ ರಾತ್ರಿ 9.30 ಗಂಟೆ ಸುಮಾರಿಗೆ ಮಲ್ಲಯ್ಯಾ ಗುಡ್ಡದ ಹತ್ತಿರ ರೋಡಿನ ಮೇಲೆ ಒಮ್ಮೇಲೆ ಎಮ್ಮೆ ಅಡ್ಡ ಬಂದಿದ್ದರಿಂದ ಎಮ್ಮೆಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ.279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ತನ್ನ ವಶದಲ್ಲಿದ್ದ ಮೋಟಾರ ಸೈಕಲನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರೋಡಿನ ಮೇಲೆ ಒಮ್ಮೇಲೆ ಎಮ್ಮೆ ಅಡ್ಡ ಬಂದಿದ್ದರಿಂದ ಎಮ್ಮೆಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದರಿಂದ ಚಾಸಾ.1ರವರ ಅಣ್ಣನಾಂದ ಮೃತ ಸುರೇಶನಿಗೆ ಹಾಗೂ ಆರೋಪಿತನಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ.338 ಅಡಿಯಲ್ಲಿ ಶಿಕ್ಷಾರ್ಹ

ಅಪರಾಧಗಳನ್ನು ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತನು ತನ್ನ ವಶದಲ್ಲಿದ್ದ ಮೋಟಾರ್ ಸೈಕಲನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರೋಡಿನ ಮೇಲೆ ಒಮ್ಮೇಲೆ ಎಮ್ಮೆ ಅಡ್ಡ ಬಂದಿದ್ದರಿಂದ ಎಮ್ಮೆಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದರಿಂದ ಚಾಸಾ.1ರವರ ಅಣ್ಣನಾಂದ ಮೃತ ಸುರೇಶನಿಗೆ ಹಾಗೂ ಆರೋಪಿತನಿಗೆ ಗಂಭೀರ ಸ್ವರೂಪದ ಗಾಯಗಳಾಗಿ ಉಪಚಾರ ಕುರಿತು ಚಾಸಾ.7 ರಿಂದ 9 ರವರು ಚಾಸಾ.10ರವರ ಕಾರಿನಲ್ಲಿ ಹಾಕಿಕೊಂಡು ಸೇಡಂ ಸರ್ಕಾರಿ ಅಸ್ಪತ್ರೆಗೆ ಸೇರಿಕೆ ಮಾಡಿ ಅಲ್ಲಿಂದ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಉಪಚಾರ ಕುರಿತು ಕಲಬುರಗಿಯ ಮಣ್ಣೂರು ಆಸ್ಪತ್ರೆಗೆ ಸೇರಿಕೆಯಾಗಿ ಉಪಚಾರ ಪಡೆಯುತ್ತಾ ಆರೋಪಿತನು ಗುಣಮುಖನಾಗಿದ್ದು ಚಾಸಾ.1ರವರ ಅಣ್ಣನಾದ ಸುರೇಶನಿಗೆ ಉಪಚಾರ ಫಲಿಸದೆ ದಿನಾಂಕ 09.11.2022ರಂದು ಮಧ್ಯಾಹ್ನ 01.03 ಪಿ.ಎಮ್. ಕ್ಕೆ ಮೃತಪಟ್ಟಿದ್ದು ಇರುತ್ತದೆ, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕ 23-07-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.318/2023**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸುರೇಶ ತಂದೆ ನಾಗಭೂಷಣ ಬಳಗಾರ
ವಃ 22 ವರ್ಷ, ಉಃ ಶ್ರೀ ಸಿಮೆಂಟ ಕಂಪನಿಯಲ್ಲಿ ಸಿವಿಲ್ ಕೆಲಸ
ಸಾಃ ಕೊಡ್ಲಾ ಗ್ರಾಮ, ತಾಃ ಸೇಡಂ

**ಆವಾದನೆ**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-

ಸಹಿ/-

ದಿನಾಂಕ 23-07-2025 ಪ್ರ.ದ.ನ್ಯಾ.ದಂ. ಸೇಡಂ.